KACM710030582025

**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.

ಉಪಸ್ಥಿತರು

ಶ್ರೀಮತಿ ಉರ್ಮಿಳ.ವಿ., ಬಿ.ಎ.ಎಲ್, ಎಲ್.ಎಲ್.ಬಿ.,
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

ದಿನಾಂಕಃ **29** ನೇ ಜೂನ್ **2026**

ಅಸಲು ದಾವಾ ಸಂಖ್ಯೆ **517/2025**

ವಾದಿ/ಯರುಃ

ಆಕಾಶ.ಎಸ್.ವಿ. ಬಿನ್ ಷಡಾಕ್ಷರಿ.ಸಿ. ಯಾನೆ ವಿಜಯಕುಮಾರ, ಸುಮಾರು 18 ವರ್ಷ, ವಾಸಃ ಹುಣಸಘಟ್ಟ ಗ್ರಾಮ, ಅಮೃತಾಪುರ ಹೋಬಳಿ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

(ಪ್ರತಿನಿಧಿಸುವವರುಃ ಶ್ರೀ ಟಿ.ಆರ್.ಆನಂದ್, ನ್ಯಾಯವಾದಿಗಳು)

-ವಿರುದ್ಧ-

ಪ್ರತಿವಾದಿ/ಯರುಃ

1) ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು -02.
2) ಡಿ.ಡಿ.ಪಿ.ಐ., ಶಿಕ್ಷಣ ಇಲಾಖೆ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು.
3) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಿಕ್ಷಣ ಇಲಾಖೆ, ತರೀಕೆರೆ, ಚಿಕ್ಕಮಗಳೂರು ಜಿಲ್ಲೆ.
4) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಿಕ್ಷಣ ಇಲಾಖೆ, ಕಡೂರು, ಚಿಕ್ಕಮಗಳೂರು ಜಿಲ್ಲೆ.
5) ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿ, 6 ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು.

Visit **ecourts.gov.in** for updates or download mobile app "**eCourts Services**" from Android or iOS

KACM710030582025

6) ಮುಖ್ಯೋಪಧ್ಯಾಯರು, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಹುಣಸಘಟ್ಟ ಗ್ರಾಮ, ಅಮೃತಾಪುರ ಹೋಬಳಿ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

7) ಮುಖ್ಯೋಪಧ್ಯಾಯರು, ಕನ್ನಡ ನೂತನ ಹಿರಿಯ ಪ್ರಾಥಮಿಕ ಶಾಲೆ, ಅಜ್ಜಂಪುರ, ಅಜ್ಜಂಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

8) ಮುಖ್ಯೋಪಧ್ಯಾಯರು, ಕರ್ನಾಟಕ ಪಬ್ಲಿಕ್ ಸ್ಕೂಲ್ (ಪ್ರಾಥಮಿಕ ವಿಭಾಗ) ಚೌಳಹಿರಿಯೂರು, ಕಡೂರು ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆ.

9) ಮುಖ್ಯೋಪಧ್ಯಾಯರು, ಸ್ನೇಹ ಇಂಗ್ಲಿಷ್ ಮಿಡಿಯಮ್ ಹೈಸ್ಕೂಲ್, ಪಂಚನಹಳ್ಳಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ

10) ಮುಖ್ಯೋಪಧ್ಯಾಯರು, ಶ್ರೀ ಸೋಮೇಶ್ವರ ಪ್ರೌಢಶಾಲೆ, (ಎಸ್.ಎಸ್.ಹೆಚ್.ಎಸ್) ಚೌಳಹಿರಿಯೂರು ಗ್ರಾಮ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

(1 ರಿಂದ 6, 8, 10 ನೇ ಪ್ರತಿವಾದಿಯರ ಪರ ಃ
ಸಹಾಯಕ ಸರ್ಕಾರಿ ವಕೀಲರು, ತರೀಕೆರೆ.
7 ನೇ ಪ್ರತಿವಾದಿಃ ಏಕತರ್ಫಿಯಾಗಿರುತ್ತಾರೆ.
9 ನೇ ಪ್ರತಿವಾದಿ ಪರಃ ಶ್ರೀ ಟಿ.ಡಿ.ಆನಂದ್, ವಕೀಲರು.)

| | | | | |
|---|---|---|---|---|
| 1 | ದಾವಾ ದಾಖಲಿಸಿದ ದಿನಾಂಕ | 08.12.2025 | | |
| 2 | ದಾವಾ ಸ್ವರೂಪ | ಘೋಷಣೆ, ನಿರ್ದೇಶನ | | |
| 3 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 09.01.2026 | | |
| 4 | ತೀರ್ಪನ್ನು ಉದ್ಘೋಷಿಸಿದ ದಿನಾಂಕ | 29.06.2026 | | |
| 5 | ತೆಗೆದುಕೊಂಡ ಅವಧಿ | ವರ್ಷ | ತಿಂಗಳು | ದಿನಗಳು |
| | | 00 | 06 | 21 |

KACM710030582025

## - ತೀರ್ಪು -

ವಾದಿಯು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ವಾದಿಯ ಶಾಲಾ ದಾಖಲಾತಿಗಳಲ್ಲಿ ವಾದಿಯ ತಂದೆಯ ಹೆಸರು ' ವಿಜಯಕುಮಾರ' ಎಂದು ಮತ್ತು ಇನಿಷಿಯಲ್ 'ಎಸ್.ವಿ.' ಎಂದು ತಪ್ಪಾಗಿ ನಮೂದಾಗಿರುವುದನ್ನು ತೆಗೆದು ಹಾಕಿ, ವಾದಿಯ ಶಾಲಾ ದಾಖಲಾತಿಗಳಲ್ಲಿ ವಾದಿಯ ತಂದೆಯ ಹೆಸರನ್ನು 'ಷಡಾಕ್ಷರಿ.ಸಿ' ಮತ್ತು ಇನಿಷಿಯಲ್‌ನ್ನು 'ಎಸ್.ಎಸ್.' ಎಂದು ತಿದ್ದುಪಡಿ ಮಾಡುವಂತೆ ಪ್ರತಿವಾದಿಯರಿಗೆ ಆದೇಶಿಸುವ ಮೂಲಕ ಘೋಷಣಾತ್ಮಕ ಡಿಕ್ರಿ ಕೋರಿ ಸಲ್ಲಿಸಿರುತ್ತಾರೆ.

**2.** ವಾದಿಯ ವಾದಪತ್ರದಲ್ಲಿನ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತೆ ಇದೆ ಃ

ವಾದಿಯ ತಂದೆ ಷಡಾಕ್ಷರಿ.ಸಿ. ಮತ್ತು ತಾಯಿಯಾದ ಸವಿತ ಇವರ ದಾಂಪತ್ಯದ ಫಲವಾಗಿ ವಾದಿಯು ದಿನಾಂಕ 22.03.2006 ರಂದು ಜನಿಸಿದ್ದು, ವಾದಿಯು ಜನಿಸಿದ 9 ತಿಂಗಳ ನಂತರ ಅವರ ತಾಯಿಯಾದ ಸವಿತ ಇವರು ಶಿರಗಲೀಪುರ ಗ್ರಾಮದಲ್ಲಿ ಮೃತಪಟ್ಟಿದ್ದು, ಸದರಿಯವರು ಮೃತಪಟ್ಟ ನಂತರ ಅವರ ತಾಯಿಯ ತವರುಮನೆಯಲ್ಲಿ ವಾದಿಯು ತನ್ನ ಅಜ್ಜ-ಅಜ್ಜಿಯೊಂದಿಗೆ ವಾಸವಾಗಿರುತ್ತಾರೆ. ವಾದಿಯ ತಂದೆಯ ಹೆಸರು ಷಡಾಕ್ಷರಿ.ಸಿ ಎಂದು ಇದ್ದು, ಅವರ ಆಧಾರ್ ಕಾರ್ಡ್, ರೇಷನ್ ಕಾರ್ಡ್, ಶಾಲಾ ದಾಖಲಾತಿ ಮತ್ತು ಇತರೆ ಎಲ್ಲಾ ದಾಖಲಾತಿಗಳಲ್ಲೂ ಹಾಗೂ ವಿವಾಹ ಆಮಂತ್ರಣ ಪತ್ರಿಕೆಯಲ್ಲಿಯೂ ಸಹ ಷಡಾಕ್ಷರಿ.ಸಿ ಎಂದು ಇದ್ದು, ಆದರೆ ಅವರನ್ನು ರೂಢಿಗತವಾಗಿ ಗ್ರಾಮದಲ್ಲಿ, ಮನೆಯಲ್ಲಿ, ನೆಂಟರಿಷ್ಟರು ವಿಜಯಕುಮಾರ ಎಂದು ಕರೆಯುತ್ತಿರುತ್ತಾರೆ.

Visit **ecourts.gov.in** for updates or download mobile app "**eCourts Services**" from Android or iOS

3. ವಾದಿಯು ಮುಂದುವರೆದು ಹೇಳುವುದೇನೆಂದರೆ, ವಾದಿಯನ್ನು ಅವರ ಅಜ್ಜ ಅಂದರೆ ತಾಯಿಯ ತಂದೆಯು 6 ನೇ ಪ್ರತಿವಾದಿಯ ಶಾಲೆಗೆ 1 ನೇ ತರಗತಿಗೆ ದಾಖಲಿಸುವ ಸಮಯದಲ್ಲಿ ವಾದಿಯ ತಂದೆಯ ಹೆಸರನ್ನು ದಾಖಲಾತಿಗಳಲ್ಲಿ ಇರುವ ಪ್ರಕಾರ ಷಡಾಕ್ಷರಿ.ಸಿ ಎಂದು ತಿಳಿಸಿದ್ದು, ಆದರೆ 6 ನೇ ಪ್ರತಿವಾದಿಯು ರೂಢಿಗತವಾಗಿ ಕರೆಯುವ ಹೆಸರಾದ ವಿಜಯಕುಮಾರ್ ಎಂದು ತಪ್ಪಾಗಿ ನಮೂದಿಸಿದ್ದು, ಇದರ ಆಧಾರದ ಮೇಲೆ 6 ನೇ ಪ್ರತಿವಾದಿಯು ವಾದಿಯ ತಂದೆಯ ಹೆಸರನ್ನು ಷಡಾಕ್ಷರಿ.ಸಿ ಎಂಬುದರ ಬದಲಾಗಿ ವಿಜಯಕುಮಾರ್ ಎಂದು ಮತ್ತು ವಾದಿಯ ಇನಿಷಿಯಲ್‌ನ್ನು 'ಎಸ್.ಎಸ್' ಎಂಬುದರ ಬದಲಾಗಿ 'ಎಸ್.ವಿ' ಎಂದು ತಪ್ಪಾಗಿ ನಮೂದು ಮಾಡಿರುತ್ತಾರೆ. ವಾದಿಯು ಮುಂದುವರೆದು ಹೇಳುವುದೇನೆಂದರೆ, ನಂತರ ವಾದಿಯು 2 ಮತ್ತು 3 ನೇ ತರಗತಿಯನ್ನು 7 ನೇ ಪ್ರತಿವಾದಿಯ ಶಾಲೆಯಲ್ಲಿ, 4 ಮತ್ತು 5 ನೇ ತರಗತಿಯನ್ನು 8 ನೇ ಪ್ರತಿವಾದಿಯ ಶಾಲೆಯಲ್ಲಿ, 6 ನೇ ತರಗತಿಯನ್ನು 9 ನೇ ಪ್ರತಿವಾದಿಯ ಶಾಲೆಯಲ್ಲಿ ಹಾಗೂ 7 ರಿಂದ 10 ನೇ ತರಗತಿಯನ್ನು 10 ನೇ ಪ್ರತಿವಾದಿಯ ಶಾಲೆಯಲ್ಲಿ ವ್ಯಾಸಾಂಗ ಮಾಡಿರುತ್ತಾರೆ. 6 ನೇ ಪ್ರತಿವಾದಿಯ ಶಾಲೆಯಲ್ಲಿ ವಾದಿಯ ಇನಿಷಿಯಲ್ ಮತ್ತು ತಂದೆಯ ಹೆಸರು ತಪ್ಪಾಗಿ ನಮೂದಾಗಿರುವುದು 7 ರಿಂದ 10 ನೇ ಪ್ರತಿವಾದಿಯರ ಶಾಲಾ ದಾಖಲಾತಿಯಲ್ಲಿ, ಅಂಕಪಟ್ಟಿಯಲ್ಲಿ ಮತ್ತು ಇತರೆ ಎಲ್ಲಾ ಶಾಲಾ ದಾಖಲಾತಿಗಳಲ್ಲಿ ನಮೂದಾಗಿ ಮುಂದುವರೆದಿರುತ್ತದೆ. ವಾದಿಯು ಮುಂದುವರೆದು ಹೇಳುವುದೇನೆಂದರೆ, ವಾದಿಯು ಇತ್ತೀಚಿಗೆ ಪ್ರಾಪ್ತ ವಯಸ್ಕರಾಗಿದ್ದು, ಅವರ ಶಾಲಾ ದಾಖಲಾತಿಗಳನ್ನು ತೆಗೆದುಕೊಂಡು

Visit **ecourts.gov.in** for updates or download mobile app "**eCourts Services**" from Android or iOS

ಪರಿಶೀಲಿಸಿದಾಗ ಈ ರೀತಿ ತಂದೆಯ ಹೆಸರು ಮತ್ತು ಅವರ ಇನಿಷಿಯಲ್ ತಪ್ಪಾಗಿ ನಮೂದಾಗಿರುವುದು ಕಂಡು ಬಂದಿದ್ದು, ಸದರಿ ತಪ್ಪಿನಿಂದ ವಾದಿಯ ಮುಂದಿನ ವಿದ್ಯಾಭ್ಯಾಸ ಮತ್ತು ಭವಿಷ್ಯದಲ್ಲಿ ತೊಂದರೆಯಾಗುವ ಸಾಧ್ಯತೆ ಇರುತ್ತದೆ. ಆದಕಾರಣ ವಾದಿಯು ದಿನಾಂಕ 27.08.2024 ರಂದು ಸಿ.ಪಿ.ಸಿ ಕಲಂ 80 ರಡಿಯಲ್ಲಿ ತನ್ನ ವಕೀಲರ ಮೂಲಕ ಪ್ರತಿವಾದಿಯರಿಗೆ ನೋಟೀಸ್ ನೀಡಿ, ತನ್ನ ದಾಖಲಾತಿಯಲ್ಲಿ ಅವರ ತಂದೆಯ ಹೆಸರು 'ವಿಜಯಕುಮಾರ' ಎಂದು ಮತ್ತು ಇನಿಷಿಯಲ್ 'ಎಸ್.ವಿ.' ಎಂದು ತಪ್ಪಾಗಿ ನಮೂದಾಗಿರುವುದನ್ನು ತೆಗೆದು ಹಾಕಿ, ವಾದಿಯ ಶಾಲಾ ದಾಖಲಾತಿಗಳಲ್ಲಿ ಅವರ ತಂದೆಯ ಹೆಸರನ್ನು 'ಷಡಾಕ್ಷರಿ.ಸಿ' ಮತ್ತು ಇನಿಷಿಯಲ್‌ನ್ನು 'ಎಸ್.ಎಸ್' ಎಂದು ಸರಿಯಾಗಿ ನಮೂದು ಮಾಡುವಂತೆ ಕೋರಿದ್ದು, ಸದರಿ ನೋಟೀಸ್ ಪ್ರತಿವಾದಿಯರಿಗೆ ಜಾರಿಯಾಗಿದ್ದು, ಸದರಿ ನೋಟೀಸ್ ಜಾರಿಯಾದ ನಂತರ ಯಾವುದೇ ಉತ್ತರ ನೀಡಿರುವುದಿಲ್ಲ ಮತ್ತು ತಿದ್ದುಪಡಿ ಮಾಡಿರುವುದಿಲ್ಲ. ಆದ್ದರಿಂದ ವಾದಿಯು ಪ್ರಸ್ತುತ ದಾವೆಯನ್ನು ಪ್ರತಿವಾದಿಯರ ವಿರುದ್ಧ ಸಲ್ಲಿಸಿರುತ್ತಾರೆ.

4. ಪ್ರತಿವಾದಿಯರಿಗೆ ನ್ಯಾಯಾಲಯದಿಂದ ಸಮನ್ಸ್ ಜಾರಿ ಮಾಡಿದ್ದು, 1 ರಿಂದ 6, 8 ಮತ್ತು 10ನೇ ಪ್ರತಿವಾದಿಯರು ಸಹಾಯಕ ಸರ್ಕಾರಿ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದು, 9ನೇ ಪ್ರತಿವಾದಿಯು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದು, 3ನೇ ಪ್ರತಿವಾದಿ ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು, 1, 2, 4 ರಿಂದ 6, 8 ರಿಂದ 10ನೇ ಪ್ರತಿವಾದಿಯರು ಸದರಿ ಪ್ರತಿವಾದ

Visit **ecourts.gov.in** for updates or download mobile app "**eCourts Services**" from Android or iOS

ಪತ್ರವನ್ನು ತಮ್ಮ ಪರವಾಗಿ ಪರಿಗಣಿಸುವಂತೆ ಮೆಮೋ ಸಲ್ಲಿಸಿರುತ್ತಾರೆ. 7 ನೇ ಪ್ರತಿವಾದಿಯು ನ್ಯಾಯಾಲಯಕ್ಕೆ ಹಾಜರಾಗದೇ ಏಕತರ್ಫಿಯಾಗಿರುತ್ತಾರೆ.

5. 1 ರಿಂದ 6, 8 ರಿಂದ 10 ನೇ ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರದಲ್ಲಿ ಪ್ರತಿವಾದಿಯರಿಗೆ ವಾದಿಯು ನೋಟೀಸು ನೀಡಿರುವುದನ್ನು ಒಪ್ಪಿಕೊಂಡು, ಉಳಿದ ವಾದ ಪತ್ರದ ಎಲ್ಲಾ ಅಂಶಗಳನ್ನು ಅಲ್ಲಗಳೆದು, ಮುಂದುವರೆದು ಶಾಲೆ ದಾಖಲಾತಿಗಳಲ್ಲಿ ವಾದಿಯ ತಂದೆಯ ಹೆಸರು ತಪ್ಪಾಗಿ ನಮೂದಾಗಿದೆ ಎಂದು ವಾದಿಯೇ ರುಜುವಾತು ಪಡಿಸತಕ್ಕದ್ದು, 1 ನೇ ತರಗತಿಯ ಶಾಲಾ ವರ್ಗಾವಣೆ ಪ್ರಮಾಣ ಪತ್ರದಲ್ಲಿ ವಾದಿಯ ತಂದೆಯ ಹೆಸರನ್ನು ವಿಜಯಕುಮಾರ್ ಎಂದು ನಮೂದು ಮಾಡಿದ್ದು, ಯಾವುದೇ ಕೈತಪ್ಪಿನಿಂದ ಶಾಲಾ ದಾಖಲಾತಿಗಳಲ್ಲಿ ನಮೂದು ಮಾಡಿರುವುದಿಲ್ಲ ಹಾಗೂ ಪ್ರತಿವಾದಿಯರಿಂದ ಸದರಿ ತಪ್ಪು ಆಗಿರುವುದಿಲ್ಲ ಎಂದು ಹೇಳಿದ್ದು, ಮುಂದುವರೆದು ಹೇಳುವುದೇನೆಂದರೆ ವಾದಿಯ ತಂದೆಯ ಹೆಸರನ್ನು ತಿದ್ದುಪಡಿ ಮಾಡುವಂತೆ ಪ್ರತಿವಾದಿಗಳಿಗೆ ನೋಟೀಸ್ ನೀಡಿದ್ದು, ಪ್ರತಿವಾದಿಗಳ ತಪ್ಪಿನಿಂದ ಹೆಸರು ನಮೂದಾಗಿರುವುದಿಲ್ಲವಾದ ಕಾರಣ ಸದರಿ ನೋಟೀಸಿನಂತೆ ತಿದ್ದುಪಡಿ ಮಾಡುವ ಅಧಿಕಾರವನ್ನು 1 ರಿಂದ 10 ನೇ ಪ್ರತಿವಾದಿಗಳು ಹೊಂದಿರುವುದಿಲ್ಲ, ವಾದಿಯ ತಂದೆಯ ಹೆಸರನ್ನು ತಪ್ಪಾಗಿ ನಮೂದಿಸಿದೆ ಎಂದು ಹೇಳಿರುವ ವಿಚಾರವು ವಾಸ್ತವಿಕ ಸಂಗತಿಗಳಿಂದ ಕೂಡಿರುವುದಿಲ್ಲ, ಆದ್ದರಿಂದ ವಾದಪತ್ರದಲ್ಲಿ ಕೇಳಿದಂತೆ ವಾದಿಯು ಪರಿಹಾರ ಪಡೆಯಲು ಅರ್ಹ ಆಗಿರುವುದಿಲ್ಲ, ಕಾರಣ ದಾವೆಯು ಊರ್ಜಿತಗೊಳ್ಳಲು

Visit **ecourts.gov.in** for updates or download mobile app “**eCourts Services**” from Android or iOS

ಯೋಗ್ಯವಾಗಿರುವುದಿಲ್ಲ, ಆದ್ದರಿಂದ ವಾದಿಯ ದಾವೆಯನ್ನು ಖರ್ಚು ಸಹಿತ ವಜಾ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

6. ಮೇಲ್ಕಾಣಿಸಿದ ವಾದ, ಪ್ರತಿವಾದಪತ್ರಗಳ ಸಂಗತಿಗಳ ಮೇಲೆ ಈ ಕೆಳಕಾಣಿಸಿದ ವಿವಾದಾಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿರುತ್ತವೆ ಃ

**RECASTED ISSUES**

1) Whether the plaintiff proves that his father's correct name is "Shadakshari.C." and initial of the plaintiff is "S.S." and in the school records of plaintiff, his father name was wrongly mentioned as "Vijayakumar" and his initial was wrongly mentioned as "S.V"?
2) Whether the plaintiff is entitle for the reliefs as sought in the plaint?
3) What order or decree?

7. ಪ್ರಸ್ತುತ ದಾವೆಯನ್ನು ರುಜುವಾತುಪಡಿಸಲು ವಾದಿಯ ತನ್ನನ್ನು ತಾನು ವಾಸಾ-1 ಎಂದು ಸಾಕ್ಷೀಕರಿಸಿದ್ದು, ತನ್ನ ಪರವಾಗಿ 11 ದಾಖಲಾತಿಗಳನ್ನು ಹಾಜರುಪಡಿಸಿ ನಿಪಿ-1 ರಿಂದ 11 ಎಂದು ಗುರ್ತಿಸಿಕೊಂಡಿರುತ್ತಾರೆ ಹಾಗೂ ತನ್ನ ಪರವಾಗಿ ಒಬ್ಬರು ಸಾಕ್ಷಿದಾರರನ್ನು ವಾಸಾ-2 ಎಂದು ಸಾಕ್ಷ್ಯ ಮಾಡಿಸಿರುತ್ತಾರೆ. ಪ್ರತಿವಾದಿಯರ ಪರವಾಗಿ 6ನೇ ಪ್ರತಿವಾದಿಯನ್ನು ಪ್ರಸಾ-1 ಎಂದು ಸಾಕ್ಷಿ ಮಾಡಿಸಿದ್ದು, ತಮ್ಮ ಪರವಾಗಿ 4 ದಾಖಲಾತಿಗಳನ್ನು ಹಾಜರುಪಡಿಸಿ ನಿಡಿ-1 ರಿಂದ 4 ಎಂದು ಗುರ್ತಿಸಿಕೊಂಡಿರುತ್ತಾರೆ.

Visit **ecourts.gov.in** for updates or download mobile app "**eCourts Services**" from Android or iOS

8. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

9. ಮೇಲ್ಕಾಣಿಸಿದ ಮರುರೂಪಿಸಲಾದ (ರಿಕಾಸ್ಟೆಡ್) ವಿವಾದಾಂಶಗಳಿಗೆ ನ್ಯಾಯಾಲಯದ ಉತ್ತರ ಈ ಕೆಳಗಿನಂತಿರುತ್ತದೆ ಃ

ಮರುರೂಪಿಸಲಾದ ವಿವಾದಾಂಶ - 1 ಃ ಸಕಾರಾತ್ಮಕವಾಗಿ,
ಮರುರೂಪಿಸಲಾದ ವಿವಾದಾಂಶ - 2 ಃ ಸಕಾರಾತ್ಮಕವಾಗಿ,
ಮರುರೂಪಿಸಲಾದ ವಿವಾದಾಂಶ - 3 ಃ ಅಂತಿಮ ಆದೇಶದಂತೆ,

ಈ ಕೆಳಗಿನ ಕಾರಣಗಳಿಗಾಗಿ,

<u>ಕಾ ರ ಣ ಗ ಳು</u>

10. <u>ಮರುರೂಪಿಸಲಾದ **(ರಿಕಾಸ್ಟೆಡ್)** ವಿವಾದಾಂಶ **– 1**</u> ಃ ಪ್ರಸ್ತುತ ದಾವೆಯನ್ನು ರುಜುವಾತುಪಡಿಸಲು ವಾದಿಯು ತನ್ನನ್ನು ತಾನು ವಾಸಾ-1 ಎಂದು ಸಾಕ್ಷೀಕರಿಸಿದ್ದು, ವಾಸಾ-1 ರವರು ತನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ, ವಾದ ಪತ್ರದ ಅಂಶಗಳನ್ನೇ ಪುನರುಚ್ಛರಿಸಿದ್ದು, ತನ್ನ ಪರವಾಗಿ ನಿಪಿ-1 ರಿಂದ 11 ದಾಖಲಾತಿಗಳನ್ನು ಗುರ್ತಿಸಿಕೊಂಡಿರುತ್ತಾರೆ. ನಿಪಿ-1 ರಿಂದ 6 ಶಾಲಾ ದಾಖಲಾತಿಗಳ ನಕಲುಗಳು ಇದ್ದು, ನಿಪಿ-7 ದಿನಾಂಕ 25.07.2024 ರಂದು ವಾದಿಯು ಪ್ರತಿವಾದಿಯರಿಗೆ ಕಳುಹಿಸಿದ ನೋಟೀಸು ಇದ್ದು, ನಿಪಿ-8 ಪ್ರತಿವಾದಿಯರಿಗೆ ಕಳುಹಿಸಿದ ನೋಟೀಸಿನ 10 ಅಂಚೆ ರಸೀದಿಗಳು ಇದ್ದು ಹಾಗೂ ನಿಪಿ-9 ಹತ್ತು ಅಂಚೆ ಸ್ವೀಕೃತಿಗಳು ಇದ್ದು, ನಿಪಿ-10 ವಾದಿಯ ತಂದೆಯ ಶಾಲಾ ದೃಢೀಕರಣ ಪತ್ರ ಇದ್ದು, ನಿಪಿ-11 ವಾದಿಯ ನೋಟರೀಕೃತ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಇರುತ್ತದೆ.

11. ವಾದಿಯು ತನ್ನ ಪರವಾಗಿ ತನ್ನ ಅಜ್ಜಿ ಶ್ರೀಮತಿ ರುದ್ರಮ್ಮರವರನ್ನು ವಾಸಾ-2 ಎಂದು ಸಾಕ್ಷ್ಯ ಮಾಡಿಸಿರುತ್ತಾರೆ. ವಾಸಾ-2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ವಾದಿ/ವಾಸಾ-1 ರವರ ಸಾಕ್ಷ್ಯಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ.

12. ಪ್ರತಿವಾದಿಯರ ಪರವಾಗಿ 6 ನೇ ಪ್ರತಿವಾದಿಯು ಪ್ರಸಾ-1 ಎಂದು ಸಾಕ್ಷ್ಯ ನುಡಿದಿದ್ದು, ಪ್ರಸಾ-1 ರವರು ತನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಪ್ರತಿವಾದ ಪತ್ರದಲ್ಲಿನ ಅಂಶಗಳನ್ನು ಪುನರುಚ್ಚರಿಸಿದ್ದು, ತಮ್ಮ ಪರವಾಗಿ ನಿಡಿ-1 ರಿಂದ 4 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ನಿಡಿ-1 ಮತ್ತು 2 ಶಾಲಾ ದಾಖಲಾತಿ ರಿಜಿಸ್ಟರಿನ ದೃಢೀಕೃತ ನಕಲುಗಳು ಇದ್ದು, ನಿಡಿ-3 ವರ್ಗಾವಣೆ ಪ್ರಮಾಣ ಪತ್ರದ ದೃಢೀಕೃತ ನಕಲು ಇದ್ದು ಮತ್ತು ನಿಡಿ-4 ಶಾಲಾ ಪ್ರವೇಶ ಪುಸ್ತಕದ ದೃಢೀಕೃತ ನಕಲು ಇದ್ದು, ಸದರಿ ದಾಖಲೆಗಳಲ್ಲಿ ವಾದಿಯ ತಂದೆಯ ಹೆಸರು ವಿಜಯ್‌ಕುಮಾರ್ ಎಂದು ನಮೂದು ಆಗಿರುವುದು ಕಂಡುಬರುತ್ತದೆ.

13. ವಾಸಾ-1 ರವರು ತಮ್ಮ ಪಾಟೀ ಸವಾಲಿನಲ್ಲಿ ತಾನು 1 ನೇ ತರಗತಿಯಿಂದ 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ, ತನ್ನ ತಾಯಿ ತಾನು 9 ತಿಂಗಳು ಮಗು ಇರುವಾಗ ಮೃತಪಟ್ಟಿರುವ ಕಾರಣ ತಾನು ತನ್ನ ತಾಯಿಯ ತಂದೆ ತಾಯಿಯಾದ ತನ್ನ ಅಜ್ಜಿ ತಾತನ ಬಳಿ ಬೆಳೆದಿರುತ್ತೇನೆ, ತನ್ನ ಅಜ್ಜಿ ತಾತ ತನ್ನನ್ನು ಶಾಲೆಗೆ ಸೇರಿಸುವ ಸಮಯದಲ್ಲಿ ತನ್ನ ಅಜ್ಜ ತನ್ನ ತಂದೆಯ ಹೆಸರು ವಿಜಯ್‌ಕುಮಾರ್ ಎಂದು ತಪ್ಪಾಗಿ

ನಮೂದು ಮಾಡಿರುತ್ತಾರೆ, ತನ್ನ ತಂದೆ ಹೆಸರು ಷಡಾಕ್ಷರಪ್ಪ.ಸಿ. ಆಗಿರುತ್ತದೆ, ತನ್ನ ತಂದೆಯನ್ನು ಮನೆಯಲ್ಲಿ ವಿಜಯ್‌ಕುಮಾರ್ ಎಂದು ಕರೆಯುತ್ತಿದ್ದ ಕಾರಣ ಅದೇ ಹೆಸರನ್ನು ನೀಡಿರುತ್ತಾರೆ, ತನ್ನ ತಂದೆ ಹೆಸರು ಷಡಾಕ್ಷರಪ್ಪ.ಸಿ. ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ತನ್ನ ತಂದೆ ಅವರ ಶಾಲಾ ದಾಖಲಾತಿಯನ್ನು ತನಗೆ ನೀಡಿರುತ್ತಾರೆ, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ನುಡಿದಿರುತ್ತಾರೆ.

14. ವಾಸಾ-2 ರವರು ತಮ್ಮ ಪಾಟೀ ಸವಾಲಿನಲ್ಲಿ ಈ ದಾವೆಯ ವಾದಿ ತನ್ನ ಮಗಳ ಮಗ, ತನ್ನ ಮಗಳನ್ನು ಷಡಾಕ್ಷರಿ.ಸಿ. ರವರಿಗೆ ಕೊಟ್ಟು ಮದುವೆ ಮಾಡಿರುತ್ತೇನೆಂದರೆ ಸರಿ, ತನ್ನ ಮೊಮ್ಮಗ 9 ತಿಂಗಳ ಮಗು ಇರುವಾಗ ತನ್ನ ಮಗಳು ತೀರಿಹೋಗಿದ್ದು, ವಾದಿ ತನ್ನ ಮೊಮ್ಮಗ ತಮ್ಮ ಜೊತೆ ಬೆಳೆದಿರುತ್ತಾನೆ ಎಂದರೆ ಸರಿ, ಷಡಾಕ್ಷರಿಯವರನ್ನು ವಿಜಯ್ ಕುಮಾರ್ ಎಂದು ಅವರ ಮನೆಯಲ್ಲಿ ಕರೆಯುತ್ತಿದ್ದರು, ಷಡಾಕ್ಷರಿಯವರ ತಂದೆ ಹೆಸರು ಚೆನ್ನಬಸಪ್ಪ ಮತ್ತು ತಾಯಿ ಹೆಸರು ಪಾರ್ವತಮ್ಮ ಆಗಿರುತ್ತದೆ ಎಂದು ನುಡಿದಿರುತ್ತಾರೆ.

15. ಪ್ರಸಾ-1 ರವರು ತಮ್ಮ ಪಾಟೀ ಸವಾಲಿನಲ್ಲಿ ನಿಪಿ-10 ರಲ್ಲಿ ವಾದಿಯ ತಂದೆ ಹೆಸರು ಷಡಾಕ್ಷರಿ.ಸಿ ಎಂದು ನಮೂದು ಇದೆ ಎಂದರೆ ಇರಬಹುದು, ವಾದಿಯ ಹೆಸರನ್ನು

Visit **ecourts.gov.in** for updates or download mobile app "**eCourts Services**" from Android or iOS

ನ್ಯಾಯಾಲಯದ ಆದೇಶದ ಮೇರೆಗೆ ಬದಲಾವಣೆ ಮಾಡಿಕೊಡಲು ತಮಗೆ ಯಾವುದೇ ತೊಂದರೆ ಇರುವುದಿಲ್ಲ ಎಂದು ನುಡಿದಿರುತ್ತಾರೆ.

16. ವಾದಿ ಪರ ವಕೀಲರು ತಮ್ಮ ವಾದದಲ್ಲಿ, ವಾದಿಯ ತಂದೆಯ ಹೆಸರು ಷಡಾಕ್ಷರಿ.ಸಿ. ಎಂದು ಇರುತ್ತದೆ, ಆದರೆ 6 ನೇ ಪ್ರತಿವಾದಿಯ ಶಾಲಾ ದಾಖಲಾತಿಯಲ್ಲಿ ವಾದಿಯ ತಂದೆಯ ಹೆಸರನ್ನು ಷಡಾಕ್ಷರಿ.ಸಿ ಎಂಬುದರ ಬದಲಾಗಿ ತಪ್ಪಾಗಿ ವಿಜಯ್ ಕುಮಾರ ಎಂದು ಮತ್ತು ವಾದಿಯ ಹೆಸರು ಇನಿಷಿಯಲ್ 'ಎಸ್.ಎಸ್.' ಎಂಬುದರ ಬದಲಾಗಿ 'ಎಸ್.ವಿ.' ಎಂದು ತಪ್ಪಾಗಿ ನಮೂದು ಮಾಡಿರುತ್ತಾರೆ, ಸದರಿ ತಪ್ಪು ಎಲ್ಲಾ ಶಾಲಾ ದಾಖಲಾತಿಗಳಲ್ಲಿಯೂ ಮುಂದುವರೆದಿರುತ್ತದೆ, ನಂತರ ವಾದಿಯು ಇತ್ತೀಚಿಗೆ ಪ್ರಾಪ್ತ ವಯಸ್ಕರಾಗಿದ್ದು, ಅವರ ಶಾಲಾ ದಾಖಲಾತಿಗಳನ್ನು ತೆಗೆದುಕೊಂಡು ಪರಿಶೀಲಿಸಿದಾಗ ಈ ರೀತಿ ವಾದಿಯ ತಂದೆಯ ಹೆಸರು ಮತ್ತು ಅವರ ಇನಿಷಿಯಲ್ ತಪ್ಪಾಗಿ ನಮೂದಾಗಿರುವುದು ಕಂಡು ಬಂದಿದ್ದು, ಸದರಿ ತಪ್ಪಿನಿಂದ ವಾದಿಯ ಮುಂದಿನ ವಿದ್ಯಾಭ್ಯಾಸ ಮತ್ತು ಭವಿಷ್ಯದಲ್ಲಿ ತೊಂದರೆಯಾಗುವ ಸಾಧ್ಯತೆ ಇರುತ್ತದೆ ಎಂದು ತಮ್ಮ ವಾದ ಮಂಡನೆ ಮಾಡಿರುತ್ತಾರೆ. ಪ್ರತಿವಾದಿಯರ ಪರ ವಕೀಲರು ತಮ್ಮ ವಾದದಲ್ಲಿ ವಾದಿಯ ಪೋಷಕರು ನೀಡಿದ ಮಾಹಿತಿಯ ಆಧಾರದ ಮೇಲೆ ಹೆಸರು ನಮೂದಿಸಿದ್ದು, ಪ್ರತಿವಾದಿಯರ ಕಡೆಯಿಂದ ಯಾವುದೇ ತಪ್ಪಾಗಿರುವುದಿಲ್ಲ ಎಂದು ತಮ್ಮ ವಾದ ಮಂಡನೆ ಮಾಡಿರುತ್ತಾರೆ.

17. ವಾಸಾ-1 ರವರು ನ್ಯಾಯಾಲಯದ ಮುಂದೆ ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ನಿಪಿ-1 ರಿಂದ 6 ವಾದಿಯ ಶಾಲಾ ದಾಖಲಾತಿಗಳ ನಕಲುಗಳು ಇದ್ದು ಮತ್ತು ನಿಪಿ-11 ವಾದಿಯ ನೋಟರೀಕೃತ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯನ್ನು ಗಮನಿಸಿದಾಗ, ಸದರಿ ದಾಖಲಾತಿಗಳಲ್ಲಿ ವಾದಿಯ ತಂದೆಯ ಹೆಸರು ವಿಜಯ್ ಕುಮಾರ್ ಎಂದು ಹಾಗೂ ವಾದಿಯ ಇನಿಷಿಯಲ್ 'ಎಸ್.ವಿ.' ಎಂದು ನಮೂದಿಸಿರುವುದು ಕಂಡುಬರುತ್ತದೆ. ಆದರೆ ನಿಪಿ-10 ವಾದಿಯ ತಂದೆಯ ಶಾಲಾ ದೃಢೀಕರಣ ಪತ್ರವನ್ನು ಗಮನಿಸಿದಾಗ ವಾದಿಯ ತಂದೆಯ ಹೆಸರು ಷಡಾಕ್ಷರಿ.ಸಿ. ಎಂದು ನಮೂದಾಗಿರುವುದು ಕಂಡುಬರುತ್ತದೆ. ನಿಪಿ-7 ರಿಂದ 10 ನ್ನು ಪರಿಶೀಲಿಸಲಾಗಿ ವಾದಿಯು ಪ್ರತಿವಾದಿಯರಿಗೆ ವಕೀಲರ ಮೂಲಕ ನೋಟೀಸ್ ಕಳುಹಿಸಿದ್ದು ಸದರಿ ನೋಟೀಸ್ ಪ್ರತಿವಾದಿಯರಿಗೆ ತಲುಪಿರುವುದು ಕಂಡುಬರುತ್ತದೆ.

18. ವಾದಿ ಮತ್ತು ಪ್ರತಿವಾದಿಯರು ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಶಾಲಾ ದಾಖಲೆಗಳಾದ ನಿಪಿ-1 ರಿಂದ 6 ಮತ್ತು 11 ಹಾಗೂ ನಿಡಿ-1 ರಿಂದ 4 ನ್ನು ಪರಿಶೀಲಿಸಲಾಗಿ ಸದರಿ ದಾಖಲೆಗಳಲ್ಲಿ ವಾದಿಯ ತಂದೆಯ ಹೆಸರು ವಿಜಯ್ ಕುಮಾರ್ ಎಂದು ಹಾಗೂ ವಾದಿಯ ಇನಿಷಿಯಲ್ 'ಎಸ್.ವಿ.' ಎಂದು ನಮೂದಿಸಿರುವುದು ಕಂಡುಬರುತ್ತದೆ. ಆದರೆ ನಿಪಿ-10 ರಲ್ಲಿ ವಾದಿಯ ತಂದೆಯ ಹೆಸರು ಷಡಾಕ್ಷರಿ.ಸಿ ಎಂದು ನಮೂದಿಸಿರುವುದು ಕಂಡುಬರುತ್ತದೆ.

Visit **ecourts.gov.in** for updates or download mobile app "**eCourts Services**" from Android or iOS

19. ಪ್ರಸ್ತುತ ದಾವೆಯ ಸಂಗತಿ ಮತ್ತು ಸಂದರ್ಭಗಳನ್ನು ಪರಿಗಣಿಸಲಾಗಿ, ವಾದಿಯ ಶಾಲಾ ದಾಖಲಾತಿಗಳಲ್ಲಿನ ವಾದಿಯ ಹೆಸರನ್ನು ತಿದ್ದುಪಡಿ ಮಾಡುವ ಬಗ್ಗೆ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ತೀರ್ಪನ್ನು ಈ ದಾವೆಯಲ್ಲಿ ಉಲ್ಲೇಖಿಸಲು ಈ ನ್ಯಾಯಾಲಯವು ಇಚ್ಛಿಸುತ್ತದೆ ಃ

***September 2010. Karnataka Court***
***Master Rohit Kannan M. V/s. State of Karnataka.***

*14. As per the Change of Name Act and also the Government Notification dated 17.2.1998, unless the parties produce the decree from the competent Civil Court, change of name cannot be made. The change of name is the discretion of the students, if they are major and if they are minor, the parents have got right to change the name for the welfare of their children.*

*As per the Circular issued by the State Government, the appellant has filed a suit seeking for declaration of change of name. The reason assigned by the trial Court to dismiss the suit is contrary to law. The Act provides for change of name. In addition to that, the Government Notification dated 17.2.1998 and also by the recent Notification dated 26.10.2015, the Government has clarified to the Government Institutions that if the students or the parents of the wards bring a decree from the Civil Court, then only the School Authorities shall make necessary correction for change of name and also date of birth.*

20. ಮೇಲೆ ತಿಳಿಸಿದ ಮಾನ್ಯ ಉಚ್ಛ ನ್ಯಾಯಾಲಯದ ತೀರ್ಪಿನ ಅಂಶಗಳಂತೆ, ಹೆಸರು ಬದಲಾವಣೆ ಕಾಯ್ದೆ ಹಾಗೂ ಸರ್ಕಾರದ ಅಧಿಸೂಚನೆ ಮೇರೆಗೆ, ಶಾಲಾ

Visit **ecourts.gov.in** for updates or download mobile app "**eCourts Services**" from Android or iOS

ಕಾಲೇಜುಗಳಲ್ಲಿನ ದಾಖಲೆಗಳಲ್ಲಿ ಸಿವಿಲ್ ನ್ಯಾಯಾಲಯದ ಡಿಕ್ರಿ ಇಲ್ಲದೆ ವಿದ್ಯಾರ್ಥಿ ಅಥವಾ ಪೋಷಕರ ಹೆಸರು ಬದಲಾಯಿಸಲು ಬರುವುದಿಲ್ಲವೆಂದು ಹಾಗೂ ಹೆಸರು ಬದಲಾಯಿಸುವುದು ವಿದ್ಯಾರ್ಥಿಯ ಇಚ್ಛೆಯಾಗಿದ್ದು ಅಥವಾ ಅವರು ಅಪ್ರಾಪ್ತರಾಗಿದ್ದರೆ ಅವರ ಪೋಷಕರು ಸದರಿ ವಿದ್ಯಾರ್ಥಿಯ ಕ್ಷೇಮಕ್ಕಾಗಿ ಹೆಸರನ್ನು ಬದಲಾಯಿಸಲು ಹಕ್ಕುವುಳ್ಳವರಾಗಿರುತ್ತಾರೆಂದು ತಿಳಿಸಿದ್ದು, ಸದರಿ ಹಕ್ಕನ್ನು ಹೆಸರು ಬದಲಾವಣೆ ಕಾಯ್ದೆ ಅಡಿಯಲ್ಲಿ ನೀಡಲಾಗಿದೆ ಎಂದು ತಿಳಿಸಲಾಗಿರುತ್ತದೆ.

21. ಪ್ರಸ್ತುತ ದಾವೆಯಲ್ಲಿ ವಾಸಾ-1 ರವರು ನ್ಯಾಯಾಲಯದ ಮುಂದೆ ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ, ನಿಪಿ-1 ರಿಂದ 6 ಮತ್ತು 11 ರಲ್ಲಿ ವಾದಿಯ ತಂದೆಯ ಹೆಸರು ವಿಜಯ್ ಕುಮಾರ್ ಎಂದು ಹಾಗೂ ವಾದಿಯ ಇನಿಷಿಯಲ್ 'ಎಸ್.ವಿ.' ನಮೂದಿಸಿರುವುದು ಕಂಡುಬರುತ್ತದೆ ಹಾಗೂ ನಿಡಿ-1 ರಿಂದ 4 ರಲ್ಲಿ ಸಹ ಅದೇ ರೀತಿ ನಮೂದಿಸಿರುವುದು ಕಂಡುಬರುತ್ತದೆ. ಆದರೆ ಮುಖ್ಯವಾಗಿ ನಿಪಿ-10 ರ ದಾಖಲೆಯನ್ನು ಗಮನಿಸಿದಾಗ ಸದರಿ ದಾಖಲೆಗಳಲ್ಲಿ ವಾದಿಯ ತಂದೆಯ ಹೆಸರು ಷಡಾಕ್ಷರಿ.ಸಿ ಎಂದು ನಮೂದಾಗಿರುವುದು ಕಂಡುಬರುತ್ತದೆ. ಆದ್ದರಿಂದ ವಾದಿಯ ತಂದೆಯ ಹೆಸರು ಷಡಾಕ್ಷರಿ.ಸಿ ಎಂದು ಮತ್ತು ವಾದಿಯ ಇನಿಷಿಯಲ್ 'ಎಸ್.ಎಸ್.' ಎನ್ನುವುದು ಕಂಡುಬರುತ್ತದೆ ಹಾಗೂ ಸದರಿ ವಾದಿಯ ತಂದೆಯ ಹೆಸರು ಮತ್ತು ವಾದಿಯ ಇನಿಷಿಯಲ್ ವಾದಿಗೆ ಸಂಬಂಧಪಟ್ಟ ಶಾಲಾ ದಾಖಲೆಗಳಲ್ಲಿ ತಪ್ಪಾಗಿ ನಮೂದಾಗಿರುವುದು ನಿಪಿ-1 ರಿಂದ 6, 11 ಮತ್ತು ನಿಡಿ-1 ರಿಂದ 4 ರಲ್ಲಿ ಕಂಡುಬರುತ್ತದೆ.

ಆದ್ದರಿಂದ ಉಭಯ ಪಕ್ಷಗಾರರ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯಗಳನ್ನು ಹಾಗೂ ಅವರ ಪರ ವಕೀಲರ ವಾದವನ್ನು ಪರಿಗಣಿಸಲಾಗಿ ವಾದಿಯ ತಂದೆಯ ಹೆಸರು ಷಡಾಕ್ಷರಿ.ಸಿ ಇದ್ದು, ವಾದಿಯ ಇನಿಷಿಯಲ್ 'ಎಸ್.ಎಸ್.' ಎಂದು ಇದ್ದು, ಆದರೆ ವಾದಿಗೆ ಸಂಬಂಧಪಟ್ಟ ನಿಪಿ-1 ರಿಂದ 6, 11 ಮತ್ತು ನಿಡಿ-1 ರಿಂದ 4 ರ ಶಾಲಾ ದಾಖಲೆಗಳಲ್ಲಿ ವಾದಿಯ ತಂದೆಯ ಹೆಸರು ವಿಜಯ್ ಕುಮಾರ್ ಎಂದು ಮತ್ತು ವಾದಿಯ ಇನಿಷಿಯಲ್ ಎಸ್.ವಿ. ಎಂದು ತಪ್ಪಾಗಿ ನಮೂದಾಗಿರುತ್ತದೆ ಎಂದು ವಾದಿಯು ರುಜುವಾತು ಪಡಿಸಿದ್ದಾರೆಂದು ಈ ನ್ಯಾಯಾಲಯವು ಅಭಿಪ್ರಾಯಪಡುತ್ತದೆ. ಆದ್ದರಿಂದ ವಿವಾದಾಂಶ-1 ನ್ನು ಸಕಾರಾತ್ಮಕ ಎಂದು ಉತ್ತರಿಸಲಾಗಿದೆ.

22. <u>ವಿವಾದಾಂಶ **– 2**</u> ಃ ವಿವಾದಾಂಶ-1 ರಲ್ಲಿ ಚರ್ಚಿಸಿದ ಕಾರಣಗಳಿಗಾಗಿ ಹಾಗೂ ಅದಕ್ಕೆ ನೀಡಿದ ಉತ್ತರಕ್ಕಾಗಿ, ವಾದಿಯ ತಂದೆಯ ಹೆಸರು ಷಡಾಕ್ಷರಿ.ಸಿ ಇದ್ದು, ವಾದಿಯ ಇನಿಷಿಯಲ್ 'ಎಸ್.ಎಸ್.' ಎನ್ನುವ ಅಂಶವನ್ನು ವಾದಿಯು ರುಜುವಾತುಪಡಿಸಿದ್ದು, ಆದ್ದರಿಂದ ವಾದಿಯು ದಾವೆಯಲ್ಲಿ ಕೇಳಿದಂತೆ ಪರಿಹಾರ ಪಡೆಯಲು ಅರ್ಹರಿರುತ್ತಾರೆಂದು ಈ ನ್ಯಾಯಾಲಯವು ಅಭಿಪ್ರಾಯ ಪಡುತ್ತದೆ. ಆದ್ದರಿಂದ ವಿವಾದಾಂಶ-2 ನ್ನು ಸಕಾರಾತ್ಮಕ ಎಂದು ಉತ್ತರಿಸಲಾಗಿದೆ.

Visit **ecourts.gov.in** for updates or download mobile app "**eCourts Services**" from Android or iOS

23. <u>ವಿವಾದಾಂಶ - **3**</u> ಃ ಈ ಮೇಲ್ಕಂಡ ವಿವಾದಾಂಶ-1 ಮತ್ತು 2 ನ್ನು ನಿರ್ಣಯಿಸಲಾಗಿ ಮತ್ತು ಅವುಗಳಿಗೆ ನೀಡಿದ ಉತ್ತರಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

## <u>ಆದೇಶ</u>

ವಾದಿಯು ಸಲ್ಲಿಸಿದ ದಾವೆಯನ್ನು ಡಿಕ್ರಿ ಮಾಡಲಾಗಿದೆ.

ಪ್ರತಿವಾದಿಯರು ವಾದಿಯ ಶಾಲಾ ದಾಖಲಾತಿಗಳಲ್ಲಿ ವಾದಿಯ ತಂದೆಯ ಹೆಸರು ‘ ವಿಜಯ್ ಕುಮಾರ್’ ಎಂದು ಇರುವುದನ್ನು ‘ಷಡಾಕ್ಷರಿ.ಸಿ.’ ಎಂದು, ವಾದಿಯ ಇನಿಷಿಯಲ್ ‘ಎಸ್.ವಿ.’ ಎಂದು ಇರುವುದನ್ನು ‘ ಎಸ್.ಎಸ್’ ಎಂದು ಈ ಆದೇಶವಾದ ಎರಡು ತಿಂಗಳ ಒಳಗಾಗಿ ತಿದ್ದುಪಡಿ ಮಾಡಿಕೊಡಲು ಈ ಮೂಲಕ ನಿರ್ದೇಶಿಸಲಾಗಿದೆ.

ಉಭಯ ಪಕ್ಷಗಾರರು ತಮ್ಮ ಖರ್ಚುಗಳನ್ನು ತಾವೇ ಭರಿಸಿಕೊಳ್ಳತಕ್ಕದ್ದು.

ಈ ಪ್ರಕಾರ ಡಿಕ್ರಿ ಬರೆಯತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ, ಓದಿ ತಿದ್ದುಪಡಿ ಮಾಡಿ, ತೆರೆದ ನ್ಯಾಯಾಲಯದಲ್ಲಿ ದಿನಾಂಕ 29 ನೇ ಜೂನ್ 2026 ರಂದು ಘೋಷಿಸಲಾಯಿತು)

URMILA V
Digitally signed by URMILA V
Date: 2026.06.29 17:31:41 +0530

ಸಹಿ
( ಉರ್ಮಿಳ.ವಿ )
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

## <u>ಅನುಬಂಧ</u>

<u>ವಾದಿಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ-</u>

ವಾಸಾ-1 ಃ ಆಕಾಶ್
ವಾಸಾ-2 ಃ ಶ್ರೀಮತಿ ರುದ್ರಮ್ಮ

KACM710030582025

ವಾದಿಯ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-

ನಿಪಿ-1 ರಿಂದ 6 ಃ ಶಾಲಾ ದಾಖಲಾತಿಗಳ ನಕಲುಗಳು
ನಿಪಿ-7 ಃ ದಿನಾಂಕ 25.07.2024 ರಂದು ವಾದಿಯು ಪ್ರತಿವಾದಿಯರಿಗೆ ಕಳುಹಿಸಿದ ನೋಟೀಸು
ನಿಪಿ-8 ಃ 10 ಅಂಚೆ ರಸೀದಿಗಳು
ನಿಪಿ-9 ಃ 10 ಅಂಚೆ ಸ್ವೀಕೃತಿಗಳು
ನಿಪಿ-10 ಃ ವಾದಿಯ ತಂದೆಯ ಶಾಲಾ ದೃಢೀಕರಣ ಪತ್ರ
ನಿಪಿ-11 ಃ ನೋಟರೀಕೃತ ಎಸ್.ಎಸ್.ಎಲ್.ಸಿ. ಅಂಕಪಟ್ಟಿ

ಪ್ರತಿವಾದಿಯರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ-

ಪ್ರಸಾ-1 ಃ ಪರಮೇಶ್ವರಪ್ಪ.ಎಸ್.ಸಿ.

ಪ್ರತಿವಾದಿಯರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-

ನಿಡಿ-1 ಮತ್ತು 2 ಃ ಶಾಲಾ ದಾಖಲಾತಿ ರಿಜಿಸ್ಟರಿನ ದೃಢೀಕೃತ ನಕಲುಗಳು
ನಿಡಿ-3 ಃ ವರ್ಗಾವಣೆ ಪ್ರಮಾಣ ಪತ್ರದ ದೃಢೀಕೃತ ನಕಲು
ನಿಡಿ-4 ಃ ಶಾಲಾ ಪ್ರವೇಶ ಪುಸ್ತಕದ ದೃಢೀಕೃತ ನಕಲು

URMILA V Digitally signed by URMILA V Date: 2026.06.29 17:31:32 +0530

ಸಹಿ
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

Visit **ecourts.gov.in** for updates or download mobile app "**eCourts Services**" from Android or iOS